# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 817 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-07-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ 2021-22, 2022-23, ಮತ್ತು 2023-24 ರಲ್ಲಿ ಕೈಗೊಂಡ ಯೋಜನೆಗಳಾವುವು. | ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ 2021-22, 2022-23, ಮತ್ತು 2023-24 ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ |
| ಆ) | ಮಂಗಳೂರಿನಲ್ಲಿ ಕೈಗೊಂಡ ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಕೈಗೊಂಡ ಕಾಮಗಾರಿಗಳು ಕಳಪೆಮಟ್ಟದಾಗಿದ್ದು, ಇತ್ತೀಚೆಗೆ ಕುಸಿದು ಬಿದ್ದಿರುವ ತಡೆಗೋಡೆಗಳಿಂದ ಉಂಟಾದ ನಷ್ಟವೆಷ್ಟು, ಈ ಬಗ್ಗೆ ತನಿಖೆ ನಡೆಸಲಾಗಿದೆಯೇ, (ವಿವರ ನೀಡುವುದು) | ಸ್ಮಾರ್ಟ್ ಸಿಟಿ ಅಭಿಯಾನದಡಿ ಸಮುದ್ರ ಕಿನಾರೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ 8 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಇದರಲ್ಲಿ 1 ಕಾಮಗಾರಿಯಲ್ಲಿ ಮಾತ್ರ ತಡೆ ಗೋಡೆಗೆ ಅಲ್ಪ ಮಾತ್ರದ ಹಾನಿಯಾಗಿದ್ದು ಉಳಿದ ಯಾವುದೇ ಕಾಮಗಾರಿಗಳಲ್ಲಿ ಪ್ರಸ್ತುತ ಮಳೆಗಾಲದಲ್ಲಿ ಹಾನಿಯಾಗಿರುವುದಿಲ್ಲ.<br><br>ಸ್ಮಾರ್ಟ್ ಸಿಟಿ ಅಭಿಯಾನದಡಿ ಸಮುದ್ರ ಕಿನಾರೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ 8 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ ಜಲಾಭಿಮುಖ ವಾಯುವಿಹಾರ ಕಾಮಗಾರಿಯು ಒಂದಾಗಿದ್ದು, ಸದರಿ ಕಾಮಗಾರಿಗೆ ದಿನಾಂಕ 07/10/2020 ರಂದು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಿದಿಂದ ಅನುಮೋದನೆ ದೊರೆತಿರುತ್ತದೆ. ಅದರಂತೆ Un coursed rubble masonry ಮೂಲಕ ನದಿ ಬದಿ ಕಡೆಗೆ ತಡೆಗೋಡೆ ನಿರ್ಮಿಸಲಾಗುತ್ತಿದ್ದು, ಈಗಾಗಲೇ ಸದರಿ ಭಾಗದಲ್ಲಿ 714ಮೀ, ತೆಡೆಗೋಡೆ ನಿರ್ಮಾಣಗೊಂಡಿದ್ದು ಅದರಲ್ಲಿ ಸುಮಾರು 15ಮೀ ಉದ್ದ ತಡೆಗೋಡೆ ಮಾತ್ರ ಕುಸಿದಿದೆ.<br><br>ಜಲಾಭಿಮುಖ ವಾಯುವಿಹಾರ ಕಾಮಗಾರಿಯಲ್ಲಿ ಪಾದಚಾರಿ ಮಾರ್ಗ, ಸೈಕಲ್ ಮಾರ್ಗ ಹಾಗೂ ಇತರೆ ಮೂಲ ಸೌಕರ್ಯಗಳನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ನೆಲವನ್ನು ಅವಶ್ಯಕ ಎತ್ತರಕ್ಕೆ ಮಟ್ಟ ಮಾಡಲು ನದಿಯ ಅಂಚಿನಲ್ಲಿ Layer by Layer ಮಣ್ಣನ್ನು compact ಮಾಡಬೇಕಾಗಿರುತ್ತದೆ. ಇದಕ್ಕಾಗಿ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಪ್ರದೇಶದಲ್ಲಿ ಗುತ್ತಿಗೆದಾರರು ಮಣ್ಣನ್ನು ಶೇಕರಣೆ ಮಾಡಿದ್ದು, ಈ ನಡುವೆ ಮಾನ್ಯ ಹಸಿರು ನ್ಯಾಯ ಮಂಡಳಿಯು ನದಿ ಭಾಗದಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ತಡೆಯಾಜ್ಞೆ ನೀಡಿರುವ ಕಾರಣ, ಮಣ್ಣನ್ನು ಹರಡಿ compact ಮಾಡಲು ಆಗಿರುವುದಿಲ್ಲ.<br><br>ಸದರಿ ಪ್ರದೇಶದಲ್ಲಿ ದಿನಾಂಕ 20/05/2024 ರಿಂದ 08/06/2024 ವರೆಗೆ ಅತೀ ಹೆಚ್ಚಿನ ಮಳೆಯಾಗಿದ್ದು, ಪ್ರಾಕೃತಿಕವಾಗಿ ಹೆಚ್ಚಿನ ಮಳೆ ನೀರು ಈ ಭಾಗದಿಂದ ಹರಿದು ಬಂದಿದ್ದು, ಶೇಕರಣೆ ಮಾಡಲಾಗಿರುವ ಮಣ್ಣು ತಡೆಗೋಡೆ ಕಡೆಗೆ ರಭಸವಾಗಿ ಹರಿದ ಕಾರಣ 15 ಮೀ ತಡೆಗೋಡೆ ಕುಸಿದಿರುತ್ತದೆ ಕಳಪೆ ಕಾಮಗಾರಿಯಿಂದ ಕುಸಿದು ಬಿದ್ದಿರುವುದಿಲ್ಲ ಮತ್ತು ಹಸಿರು ನ್ಯಾಯ ಮಂಡಳಿಯಲ್ಲಿ ಕಾಮಗಾರಿಗೆ ತಾತ್ಕಾಲಿಕ ತಡೆಯಾಜ್ಞೆ ಇರುವುದರಿಂದ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಕಷ್ಟ ಸಾಧ್ಯವಾಗಿದೆ. ಆದಾಗ್ಯೂ ಹಾನಿಯಾಗಿರುವ ಭಾಗದಲ್ಲಿ ಜನರ ಓಡಾಟ ನಿಯಂತ್ರಿಸಲು ಹಾಗೂ ಸುರಕ್ಷತೆ ದೃಷ್ಟಿಯಿಂದ Barricade ಗಳನ್ನುಒದಗಿಸಲಾಗಿದೆ. |

| | | |
|---|---|---|
| | | ಸದರಿ ಕಾಮಗಾರಿಗೆ ಯಾವುದೇ ಗುತ್ತಿಗೆದಾರರಿಗೆ ಬಿಲ್ ಪಾವತಿಯಾಗಿರುವುದಿಲ್ಲ ಹಾಗೂ ಗುತ್ತಿಗೆದಾರರಿಗೆ ಕಾಮಗಾರಿ ಕರಾರಿರನ್ವಯ Cost & Risk ಷರತ್ತಿಗೆ ಒಪ್ಪಿರುವಂತೆ ಸರಿಪಡಿಸಬೇಕಾಗಿ ನೋಟಿಸು ನೀಡಲಾಗಿರುತ್ತದೆ |
| ಇ) | ನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡ ಹಂಪನಕಟ್ಟೆ ಪಾರ್ಕಿಂಗ್ ಕಾಂಪ್ಲೆಕ್ಸ್ ಕಾಮಗಾರಿ ಕುಂಠಿತಗೊಳ್ಳಲು ಕಾರಣವೇನು,<br>ಯಾವ ಕಾಲಮಿತಿಯೊಳಗೆ ಪೂರ್ಣಗೊಳ್ಳುವುದು, (ವಿವರ ನೀಡುವುದು) | ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಹಂಪನ್‌ಕಟ್ಟೆ ಬಳಿ ಇರುವ ಹಳೆ ಬಸ್ಸ್ ನಿಲ್ದಾಣದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಮಲ್ಟಿಲೆವೆಲ್ ಕಾರ್ ಪಾರ್ಕಿಂಗ್ ಯೋಜನೆಗೆ ಗುತ್ತಿಗೆದಾರರನ್ನು ನಿಯೋಜಿಸಲಾಗಿರುತ್ತದೆ. ಸದರಿ ಕಾಮಗಾರಿಯ ಕಾರ್ಯದೇಶ ಹಾಗೂ ಕರಾರನ್ನು ದಿನಾಂಕ:25.08.2021ರಂದು ಮಂಗಳೂರು ಮಹಾನಗರ ಪಾಲಿಕೆಯೊಂದಿಗೆ ಮಾಡಲಾಗಿರುತ್ತದೆ. ಕರಾರಿನ್ವಯ ಕಾಮಗಾರಿಯನ್ನು ದಿನಾಂಕ:28.08.2024 ರಂದು ಪೂರ್ಣಗೊಳಿಸಬೇಕಾಗಿರುತ್ತದೆ<br><br>ಕಾಮಗಾರಿಗೆ ಕಾರ್ಯದೇಶ ನೀಡಿದ ಗುತ್ತಿಗೆದಾರರ ಆರ್ಥಿಕ ಪರಿಸ್ಥಿತಿ ತೊಂದರೆಯಿಂದಾಗಿ ಕಾಮಗಾರಿ ಕುಂಠಿತಗೊಂಡಿದ್ದು, ಈ ಬಗ್ಗೆ ಅಧ್ಯಕ್ಷರು, ಮಂಗಳೂರು ಸ್ಮಾರ್ಟ್ ಸಿಟಿ ಮಂಡಳಿ ಇವರು ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಗುತ್ತಿಗೆದಾರರು ಕಾಮಗಾರಿಯನ್ನು ಕರಾರಿರನ್ವಯ ಸೂಕ್ತ ಕ್ರಮವಹಿಸುವಂತೆ ಸೂಚನೆ ನೀಡಲಾಗಿದೆ. |
| ಈ) | ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಂಪ್‌ವೆಲ್ ಬಳಿ ಪ್ರಾರಂಭಗೊಳ್ಳಲು ಉದ್ದೇಶಿರುವ "ಬಸ್ಸು ನಿಲ್ದಾಣದ" ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು, (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಪಂಪ್‌ವೆಲ್‌ಗೆ ಸೇರಿರುವ ಸುಮಾರು 7.23 ಎಕರೆ ಜಾಗದಲ್ಲಿ ರೂ. 445.00 ಕೋಟಿ ವೆಚ್ಚದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ) ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ 3 ಬಾರಿ ಟೆಂಡರ್ ಕರೆಯಲಾಗಿರುತ್ತದೆ. ಆದರೆ 3 ಬಾರಿ ಟೆಂಡರ್ ಕರೆದರೂ ಯಾವುದೇ ಬಿಡ್ಡುದಾರರು ಆಸಕ್ತಿ ತೋರಿಸಿರುವುದಿಲ್ಲ.<br><br>ಮುಂದುವರೆದು, ಈ ಬಗ್ಗೆ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆಯೊಂದಿಗೆ ಚರ್ಚಿಸಿ, ಬಸ್ ನಿಲ್ದಾಣದ ವಿನ್ಯಾಸ ಹಾಗೂ ಆರ್ಥಿಕ ಕಾರ್ಯಸಾಧ್ಯತೆಗಾಗಿ ಆಸಕ್ತಿಯುಳ್ಳ ಅಭಿವ್ಯಕ್ತಿದಾರರಿಂದ ವಿನ್ಯಾಸಗಳನ್ನು ದಿನಾಂಕ: 23.12.2021 ರಂದು ಆಹ್ವಾನಿಸಲಾಗಿದ್ದು, ಯಾವುದೇ ವಿನ್ಯಾಸಗಳು ಅರ್ಹಗೊಂಡಿರುವುದಿಲ್ಲ.<br><br>ದಿನಾಂಕ: 15.06.2023 ರಂದು ನಡೆದ 29ನೇ ಮಂಗಳೂರು ಸ್ಮಾರ್ಟ್ ಸಿಟಿ ನಿರ್ದೇಶಕರ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಸದರಿ ಕಾಮಗಾರಿಗೆ ಯಾವುದೇ ಬಿಡ್ಡುದಾರರು ಆಸಕ್ತಿ ತೋರಿಸದೆ ಇರುವುದರಿಂದ ಹಾಗೂ ಸ್ಮಾರ್ಟ್ ಸಿಟಿ ಅಭಿಯಾನಕ್ಕೆ ಕಾಲಮತಿಯಿರುವುದರಿಂದ ಸದರಿ ಕಾಮಗಾರಿಯನ್ನು ಕೈಬಿಡಲು ನಿರ್ಣಯಿಸಲಾಗಿರುತ್ತದೆ. |

ಸಂಖ್ಯೆ: ನಅಇ 124 ಸಿಎಸ್‌ಎಸ್ 2024

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ

ಅನುಬಂಧ - 1

Mangaluru Smart City Limited

Year : 2021-2022

| Sl.No | Name of the Project | DPR Cost | Work Order date | Project | Present Status |
|---|---|---|---|---|---|
| 1 | Restoration Scheme for the collapsed portion of the existing stone revetment of Nethravathi river bank and SSM jack well No.2 on the upstream side of Thumbe vented dam, Mangaluru | 10.50 | 25.05.2021 | SCM | Ongoing |
| 2 | Construction of Indoor Stadium for Kabaddi & Shuttle Badminton near Urva Market | 20.54 | 13.08.2021 | SCM | Ongoing |
| 3 | Development of MLCP with retail space near Hampankatta Junction | 79.05 | 25.08.2021 | PPP | Ongoing |
| 4 | Integrated Development of Kadri Park Phase-II Package-B: Providing Automatic Irrigation system with Planting, granite pergolas and Street light and electrical upgradation work. | 4.50 | 16.12.2021 | SCM | Completed |
| 5 | Conversion of Existing 11 KV HT/LT overhead lines of 11 KV Bolara and Mangaladevi feeders, emanating from 33/11 KV MUSS Nandigudda into UG Cabling system at Mangaladevi Temple road and New Monkey Stand road | 4.45 | 16.02.2022 | SCM | Completed |
| 6 | Development of Mangaladevi Bus Terminal and Upgradation of Urban Primary Health Centre | 4.98 | 30.03.2022 | SCM | Ongoing |
| 7 | Conversion of Street Lights to LED | 62.63 | 23.02.2022 | PPP | Ongoing |
| | | 311.22 | | | |

Year : 2022-2023

| Sl.No | Name of the Project | DPR Cost | Work Order date | Project | Present Status |
|---|---|---|---|---|---|
| 1 | Command and Control Center - Stage 2 | 28.89 | 05.05.2022 | SCM | Ongoing |
| 2 | Waterfront Area Development Sub Project - Promenade Development Phase 1A | 13.15 | 05.05.2022 | SCM | Ongoing |
| 3 | Waterfront Area Development Sub Project - Promenade Development Phase 1B | 6.00 | 05.05.2022 | SCM | Ongoing |
| 4 | Waterfront Area Development Sub Project - Promenade Development Phase 1C | 4.09 | 05.05.2022 | SCM | Ongoing |
| 5 | Waterfront Area Development Sub Project - Promenade Development Phase 2A | 8.44 | 05.05.2022 | SCM | Ongoing |
| 6 | Waterfront Area Development Sub Project - Promenade Development Phase 2B | 1.04 | 05.05.2022 | SCM | Ongoing |
| 7 | Area Development at Tannirbhavi | 12.60 | 05.05.2022 | SCM | Ongoing |
| 8 | Area Development at Sulthan Battery | 9.77 | 05.05.2022 | SCM | Ongoing |
| 9 | Sea-River Link Bridge at Sulthan Battery | 49.93 | 05.05.2022 | SCM | Ongoing |
| 10 | Surface Lake Aeration Fountains at Gujjar Kere | 0.41 | 07.05.2022 | SCM | Completed |
| 11 | Redevelopment of Central Market along with Fish Market | 114.03 | 16.01.2023 | PPP | Ongoing |
| | **TOTAL** | 496.67 | | | |

Year : 2023-2024

| Sl.No | Name of the Project | DPR Cost | Work Order date | Project | Present Status |
|---|---|---|---|---|---|
| | NILL | | | | |

ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಮಂಗಳೂರು